# ಜಾಗೃತಿ ಬೇಕು; ಆರ್ಥಿಕ ಸ್ಥಿತಿಯನ್ನೂ ಗಣಿಸಬೇಕು



**-ಡಾ. ಸುನೀತಾ ಶರ್ಮಾ**
**ಸ್ತ್ರೀರೋಗ ಹಾಗೂ ಇನ್‌ಫರ್ಟಿಲಿಟಿ ತಜ್ಞೆ**

ನಮ್ಮಲ್ಲಿ ಹೆಣ್ಣುಮಕ್ಕಳು ಗರ್ಭ ಧರಿಸಿದ ಗಾಬರಿಯಲ್ಲಿ, ಸಂತೋಷದಲ್ಲಿ ಆಸ್ಪತ್ರೆಗೆ ಬರೋದು ಹೊರತಾಗಿ, 'ಎರಡನೇ ಮಗು ಮಾಡಿಕೊಳ್ಳಬಹುದಾ?' ಎಂದು ಅಭಿಪ್ರಾಯ ಕೇಳಿಕೊಂಡು ಡಾಕ್ಟರ್ ಬಳಿ ಬರೋದು ತೀರಾ ಎಂದರೆ ತೀರಾ ಕಡಿಮೆ. ನನ್ನ ಸುದೀರ್ಘ ಅವಧಿಯ ವೃತ್ತಿಜೀವನದಲ್ಲಿ ಬೆರಳೆಣಿಕೆಯಷ್ಟು ದಂಪತಿ ಮಾತ್ರ ಈ ಕುರಿತು ಸಲಹೆ ಪಡೆದಿದ್ದಾರೆ. ಆದರೆ ಎರಡನೇ ಮಗುವಿನ ಅಬಾರ್ಷನ್‌ಗೆ ಬರುವವರ ಸಂಖ್ಯೆ ಜಾಸ್ತಿ ಇದೆ.

ನನ್ನ ವೃತ್ತಿ ಅನುಭವದಲ್ಲಿ ಹೇಳುವುದಾದರೆ, ಹೆಣ್ಣುಮಕ್ಕಳು ತಮ್ಮ ಆರೋಗ್ಯವನ್ನೆಲ್ಲಾ ಪರಿಗಣಿಸಿ ಎರಡನೇ ಮಗುವಿನ ನಿರ್ಧಾರ ತೆಗೆದುಕೊಳ್ತಾರೆ ಅಂತ ನನಗೇನೂ ಅನ್ನಿಸಿಲ್ಲ. ಈ ಮುಂಚೆ ಭಾವನಾತ್ಮಕವಾಗಿ ಎರಡನೇ ಮಗು ಬೇಕೆಂಬ ನಿಲುವು ಇರುತ್ತಿತ್ತು. ಈಗ ಗಂಡ–ಹೆಂಡತಿ ಆರ್ಥಿಕ ವಿಷಯಗಳನ್ನು ಪರಿಗಣಿಸಿ ನಿರ್ಧರಿಸುತ್ತಿದ್ದಾರೆ. ಆದರೂ ಎರಡನೇ ಮಗು ಬೇಕೆ ಬೇಡವೆ ಎಂಬುದು ಹೆಚ್ಚಾಗಿ ಗಂಡ ಮತ್ತು ಮನೆಯವರ ಅಭಿಪ್ರಾಯದ ಮೇಲೆ ನಿರ್ಧಾರವಾಗುತ್ತದೆ.

ಕೋವಿಡ್ ಸಮಯದಲ್ಲಿ ಎರಡನೇ ಬಾರಿ ಗರ್ಭಧರಿಸಿ ಅಬಾರ್ಷನ್‌ಗೆ ಬಂದವರ ಸಂಖ್ಯೆ ಬಹಳ ದೊಡ್ಡದಿದೆ. ಅವರು ಕೊಟ್ಟ ಕಾರಣಗಳಲ್ಲಿ – ಗಂಡನ ಉದ್ಯೋಗ ಹೋಯಿತು, ನಮ್ಮ ಪ್ಲ್ಯಾನ್ ಪ್ರಕಾರ ಈಗಿನ ಸೇವಿಂಗ್ಸ್ ಎರಡನೇ ಮಗುವಿಗೆ ಸಾಕಾಗೋದಿಲ್ಲ, ಹೊಸ ಮನೆ ಕೊಳ್ಳಬೇಕು, ಭವಿಷ್ಯಕ್ಕಾಗಿ ಕೂಡಿಡಬೇಕು, ಕೋವಿಡ್‌ನಂತಹ ರೋಗ ರುಜಿನ ಜಾಸ್ತಿಯಾಗಬಹುದು, ಕೋವಿಡ್ ಸಮಯದಲ್ಲಿ ಮನೆ ಖರ್ಚು ಜಾಸ್ತಿಯಾಗಿದೆ, ಮುಂದೆ ಇದೇ ರೀತಿ ಮನೆಯಲ್ಲಿ ಮಕ್ಕಳನ್ನು ಕೂಡಿ ಹಾಕಿ ಬೆಳೆಸುವ ಪರಿಸ್ಥಿತಿ ಬರಬಹುದು ಎಂದೆಲ್ಲ ಇದ್ದವು. ಕೋವಿಡ್ ಮತ್ತು ಅದರಿಂದ ಆದ ಆರ್ಥಿಕ ಪರಿಸ್ಥಿತಿಯಿಂದ ಎರಡನೇ ಮಗು ಬೇಡ ಎಂದು ಅಬಾರ್ಷನ್‌ಗೆ ಒಳಗಾದವರು ಹೆಚ್ಚಿದ್ದಾರೆ.

ಆರ್ಥಿಕವಾಗಿ ಮತ್ತು ಆರೋಗ್ಯದಲ್ಲಿ ದಂಪತಿ

ಮಾಹಿತಿ, ಆಟಿಸಂ, ಶೈಶವಾವಸ್ಥೆ–ಬಾಲ್ಯ, ಹದಿಹರಯ, ಆರೋಗ್ಯ, ಕಲಿಕೆಯ ಸಮಸ್ಯೆ, ಈ ಎಲ್ಲದ ಕುರಿತಾದ ಮಾಹಿತಿ ಅಲ್ಲಿ ಲಭ್ಯವಿದೆ. ವೇದಿಕೆಯಲ್ಲಿ ಪಾಲಕರು ಸಮಸ್ಯೆಗಳನ್ನು ಹೇಳಿಕೊಂಡರೆ ಬೇರೆ ಪಾಲಕರಿಗೆ ಅದಕ್ಕೆ ಉತ್ತರಿಸುವ ಅವಕಾಶ ಕೂಡ ಇದೆ. ಇದೇ ವೇದಿಕೆಯಲ್ಲಿ ಒಬ್ಬರು ಮಹಿಳೆ, ಎರಡನೇ ಮಗು ಮಾಡಿಕೊಳ್ಳಬೇಕೇ ಬೇಡವೇ ಎಂಬ ತಮ್ಮ ಗೊಂದಲವನ್ನು ಹೀಗೆ ಹಂಚಿಕೊಂಡಿದ್ದರು:

'ನಾನು 4 ವರ್ಷದ ಗಂಡು ಮಗುವಿನ ತಾಯಿ. ನನ್ನ ಮದುವೆಗೆ ಮುಂಚೆಯೇ ನನ್ನ ತಂದೆ–ತಾಯಿ ತೀರಿಹೋಗಿದ್ದಾರೆ. ನನಗೆ ಹತ್ತಿರದ ಸಂಬಂಧಿಕರೂ ಯಾರೂ ಇಲ್ಲ. ನನ್ನ ಗಂಡ ಕೆಲಸದ ಮೇಲೆ ಹೊರಗಡೆ ಇರುವುದು ಜಾಸ್ತಿ. ಅವರು ಈಗ ಎರಡನೇ ಮಗು ಮಾಡಿಕೊಳ್ಳೋಣ ಎಂದು ಹೇಳುತ್ತಿದ್ದಾರೆ. ಇದು ಸರಿಯಾದ ನಿರ್ಧಾರವೇ ಎಂಬ ಪ್ರಶ್ನೆ ನನ್ನನ್ನೀಗ ಕಾಡುತ್ತಿದೆ. ನನಗೆ ಯಾವುದೇ ಖಚಿತ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಏಕಕಾಲದಲ್ಲಿ ಮನೆ, ಮಕ್ಕಳು, ಅತಿಥಿಗಳು ಮತ್ತು ಇತರ ಹೊರಗಿನ ಕೆಲಸಗಳನ್ನು ನೋಡಿಕೊಳ್ಳಲು ನನಗೆ ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆ ಎರಡನೇ ಮಗು ಮಾಡಿಕೊಳ್ಳಲು ಹೆದರುತ್ತಿದ್ದೇನೆ. ನನ್ನ ಮೊದಲನೇ ಮಗನ ಬಗ್ಗೆ ಯೋಚಿಸಿದಾಗ ಅವನಿಗೆ ಜೊತೆಯಾಗಿ ಆಟವಾಡಲು ಇನ್ನೊಂದು ಮಗು ಬೇಕು ಎನಿಸುತ್ತದೆ. ಆದರೆ, ಇಬ್ಬರು ಮಕ್ಕಳ ಆಟ ಊಟ ಪಾಠ ಪರೀಕ್ಷೆಗಳನ್ನು ನಾನೊಬ್ಬಳೇ ನಿಭಾಯಿಸಬೇಕು ಎಂಬ ಆಲೋಚನೆಯೇ ನನ್ನನ್ನು ಗಾಬರಿಯಾಗುವಂತೆ ಮಾಡುತ್ತದೆ. ನನಗೆ ತಾಳ್ಮೆ ಕೂಡ ಕಡಿಮೆ. ಬೇಗ ಸಿಟ್ಟಾಗುತ್ತೇನೆ.'

ಎರಡನೇ ಮಗು ಮಾಡಿಕೊಳ್ಳುವಲ್ಲಿ ಇರುವ ಆಸೆ–ಆತಂಕ ಎರಡನ್ನೂ ಈ ಪ್ರಶ್ನೆ ತುಂಬ ಸಮರ್ಥವಾಗಿ ಬಿಚ್ಚಿಡುತ್ತಿದೆ. ಇದು ಆ ಒಬ್ಬ ಮಹಿಳೆಯ ಗೊಂದಲವಲ್ಲ. ಒಂದು ಮಗುವಿರುವ ಕುಟುಂಬದ ಬಹುತೇಕ ಅಮ್ಮಂದಿರ ಗೊಂದಲವೂ ಹೌದು. ಆದರೆ, ಬಹುತೇಕ ಮಹಿಳೆಯರಿಗೆ ಇಂಥದ್ದೊಂದು ಪ್ರಶ್ನೆಯನ್ನು ಇಬ್ಬೊಬ್ಬರ ಬಳಿ ಕೇಳುವ ಅವಕಾಶ ಇರುವುದಿಲ್ಲ. ಹಾಗಾಗಿ ಅದು ಅವರ ಮನಸೊಳಗಿನ ಆತಂಕವಾಗಿಯೇ

## ಮಕ್ಕಳು ಏನಂತಾರೆ?

ನನ್ನ ಅಪ್ಪ ಅಮ್ಮನಿಗೆ ನಾನು ಒಬ್ಬನೇ ಅಥವಾ ನನ್ನ ಅಕ್ಕ ಒಬ್ಬಳೇ ಆಗಿದ್ದರೆ ನಮಗೆ ಬೇಕಾದ ಒಂದು ಚಿಕ್ಕ ವಸ್ತುವನ್ನು ಕೊಳ್ಳುವಾಗ ಹತ್ತಾರು ಬಾರಿ ಯೋಚಿಸಬೇಕಿರಲಿಲ್ಲ; ಅಪ್ಪ–ಅಮ್ಮ ಮನೆಯ ಮತ್ತು ನಮ್ಮ ಖರ್ಚು ವೆಚ್ಚಗಳನ್ನು ನಿಭಾಯಿಸಲು ಬದುಕನ್ನೇ ಒತ್ತೆಯಿಟ್ಟವರಂತೆ ದುಡಿಯಬೇಕಾಗಿ ಬರುತ್ತಿರಲಿಲ್ಲ ಎಂದು ಹೈಸ್ಕೂಲು ಕಾಲೇಜು ದಿನಗಳಲ್ಲಿ ಅನಿಸುತ್ತಿತ್ತು. ಇಷ್ಟೆಲ್ಲಾ ಒದ್ದಾಡುವುದಾದರೆ ಎರಡು ಮಕ್ಕಳು ಯಾಕೆ ಬೇಕಿತ್ತು ಎಂದು ಅವರಿಗೆ ಎನಿಸಿದ್ದಿದೆ. ಅವರ ಕಷ್ಟಗಳನ್ನು ಕಂಡಾಗ ಹುಟ್ಟಲೇಬಾರದಿತ್ತು ಎಂದು ನನಗೂ ಎನಿಸಿದೆ. ಮನೆಯವರ ಮೇಲೆ ಪ್ರೀತಿ ಖಂಡಿತಾ ಇದೆ. ಹಾಗೆಯೇ ಈ ಪ್ರಶ್ನೆಗಳು ಕಾಡಿದ್ದೂ ನಿಜ. ಈಗ ನನಗೆ ಉದ್ಯೋಗ ಸಿಕ್ಕ ಮೇಲೆ ಹೀಗೆ ಅನಿಸಿದ್ದು ಕಡಿಮೆ.

**-ತಿಪ್ಪೇಶ್ ಕುಮಾರ್,** ಗ್ರಾಫಿಕ್ ಡಿಸೈನರ್

